ದಿನಾಂಕ: 27–11–2021ರಂದು ಶನಿವಾರ ಬೆಳಗ್ಗೆ 11:00 ಘಂಟೆಗೆ ವಾರ್ಡ್ ಸಂಖ್ಯೆ:81 ವಿಜ್ಞಾನನಗರ ವಾರ್ಡಿನ ಶ್ರೀ.ಕೇಶವ್ ,ತೋಟಗಾರಿಕೆ ಅಧಿಕ್ಷಕರು (Nodel Officer) ರವರ ಅಧ್ಯಕ್ಷತೆಯಲ್ಲಿ ವರ್ಚುಯಲ್‌ನಲ್ಲಿ (ಗೂಗಲ್ ಮೀಟ್) ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಹಾಜರಿದ್ದ ಅಧಿಕಾರಿಗಳು :

| | |
|---|---|
| 1. | ಶ್ರೀ. ಸುರೇಶ್. ಎಲ್, ಕಿರಿಯ ಅಭಿಯಂತರರು, ವಾರ್ಡ್ ನಂ.81 ಹಾಗೂ ಸದಸ್ಯ ಕಾರ್ಯದರ್ಶಿ |
| 2. | ಶ್ರೀ.ರಮಣ ಮೂರ್ತಿ, ಎಸ್.ಆರ್.ಆರ್. ಬಡಾವಣೆ |
| 3. | ಶ್ರೀ. ಶ್ರೀಧರ್ ರಾಮದುರ್ಗ |
| 4. | ಶ್ರೀ. ಪ್ರಕಾಶ್, ಶಿವಗಂಗಾ ಬಡಾವಣೆ |
| 5. | ಶ್ರೀ. ಮನೋಜ್,ವಿಜ್ಞಾನ ನಗರ |
| 6. | ಶ್ರೀ. ಕಾರ್ತಿಕ್, ಅಬ್ಬಯ್ಯ ರೆಡ್ಡಿ ಬಡಾವಣೆ |
| 7. | ಶ್ರೀಮತಿ ಗೀತಾ ಪಾರ್ವತಿಕರ್, ವೀರಭದ್ರ ನಗರ ಬಡಾವಣೆ |
| 8. | ಶ್ರೀ, ಮಹೇಶ್ , ಅಬ್ಬಯ್ಯ ರೆಡ್ಡಿ ಬಡಾವಣೆ |
| 9. | ಶ್ರೀಮತಿ. ವಾಣಿ, ತಲಕಾವೇರಿ ಬಡಾವಣೆ |
| 10. | ಶ್ರೀ. ನಾರಾಯಣ್, ನಿವಾಸಿಗಳು |

ಶ್ರೀ. ಸುರೇಶ್. ಎಲ್, ಕಿರಿಯ ಅಭಿಯಂತರರು, ವಾರ್ಡ್ ನಂ.81 ಹಾಗೂ ಸದಸ್ಯ ಕಾರ್ಯದರ್ಶಿಗಳು ನೂತನವಾಗಿ ಮಹದೇವಪುರ ವಲಯದ ತೋಟಗಾರಿಕೆ ಅಧೀಕ್ಷಕರಾದ ಶ್ರೀ. ಕೇಶವ್ ರವರನ್ನು ಸ್ವಾಗತಿಸುತ್ತಾ, ಹಾಜರಿದ್ದ ಸದಸ್ಯರುಗಳಿಗೆ ಪರಿಚಯ ಮಾಡಿ ಸಭೆಯನ್ನು ನಡೆಸಿಕೊಡುವಂತೆ ಕೋರಿದರು.

ಮಾನ್ಯ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಫೇರ್ ಅಸೋಸಿಯೇಷನ್‌ನ ಅಧ್ಯಕ್ಷರುಗಳು, ಪ್ರತಿನಿಧಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ ನಡೆದ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

ಶ್ರೀ.ರಮಣ ಮೂರ್ತಿ ಮೊ: 7892976933 ರವರು ಮಾತನಾಡಿ ಘನತ್ಯಾಜ್ಯ ವಿಲೇವಾರಿಯಲ್ಲಿ ಅವ್ಯವಸ್ಥೆ ಉಂಟಾಗಿದ್ದು ವಾಹನಗಳು ಬಡಾವಣೆಗಳಿಗೆ ಬರುವ ಹಾಗೂ ಹೋಗುವ ವೇಳೆ ನಿವಾಸಿಗಳಿಗೆ ಗೊತ್ತಿಲ್ಲದೆ ಎಲ್ಲಿಂದರ ಅಲ್ಲಿ ಕಸ ಶೇಖರಣೆಯಾಗುತ್ತಿದ್ದು ಈ ಬಗ್ಗೆ ಆರೋಗ್ಯ ಶಾಖೆಯು ಮಾಹಿತಿಯನ್ನು ನೀಡಿ ಸರಿಯಾದ ಸಮಯಕ್ಕೆ ಕಸ ಸಂಗ್ರಹಣೆ ಮಾಡುವಂತೆ ಕೋರಿದರು,

ಮಹಾಮಾರಿ ಕೋವಿಡ್-19 ರೂಪಾಂತರಗೊಂಡ ಒಮಿಕ್ರಾನ್ ವೈರಸ್ ಅತಿವೇಗವಾಗಿ ಹರಡುತ್ತಿರುವ ಬಗ್ಗೆ ಸಭೆಯ ಗಮನಕ್ಕೆತಂದು ಎರಡನೇ ಡೋಸ್ ಲಸಿಕೆ ಪಡೆಯದ ಸಾರ್ವಜನಿಕರು ತುರ್ತಾಗಿ ಪಡೆಯುವಂತೆ ಆರೋಗ್ಯ ಶಾಖೆಯು ನಿಗಾವಹಿಸುವಂತೆ ಕೋರಿದರು.

ವಾರ್ಡ್ ಸಂಖ್ಯೆ-81ರ ಬಡಾವಣೆಗಳಲ್ಲಿ ಔಷದಿ ಸಿಂಪಡಣೆ ಮಾಡುವಂತೆ ಕೋರಿದರು.

ಕ್ರಮ: ಹಿರಿಯ ಆರೋಗ್ಯ ನಿರೀಕ್ಷಕರು

ಬಡಾವಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬೀದಿ ದೀಪಗಳು ಹಾಳಾಗಿದ್ದು ತುರ್ತಾಗಿ ಸರಿಪಡಿಸಿಕೊಡುವಂತೆ ಕೋರಿದರು ಹಾಗೂ ಈ ಬಗ್ಗೆ ಶ್ರೀ. ಮನೋಜ್,ವಿಜ್ಞಾನ ನಗರ ರವರು ಸಹ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೋರಿದರು.

ಕ್ರಮ: ಅಭಿಯಂತರರು, ವಿದ್ಯುತ್ ವಿಭಾಗ

ಶ್ರೀ ಶ್ರೀಧರ್ ಮೊ: 8944173098 ರವರು ಮಾತನಾಡಿ ಮುಖ್ಯರಸ್ತೆಗಳಲ್ಲಿ ಮತ್ತೊಮ್ಮೆ ಪೋಸ್ಟರ್‌ಗಳ ಹಾವಳಿ ಜಾಸ್ತಿಯಾಗಿದ್ದು ಇದನ್ನು ತೆರವುಗೊಳಿಸುವಂತೆ ಕೋರಿದರು,

ಇತ್ತೀಚಿಗೆ ಸುರಿದ ಭಾರಿ ಮಳೆಯಿಂದ ಬಡಾವಣೆಗಳು ಜಲಾವೃತಗೊಂಡಿದ್ದು ಈ ಬಗ್ಗೆ ರಾಜಕಾಲುವೆಗಳಲ್ಲಿ ಹೂಳೆತ್ತುವುದು ಸೇರಿದಂತೆ ನ್ಯಾಯಾಲಯಗಳಲ್ಲಿರುವ ಪ್ರಕರಣಗಳ ಬಗ್ಗೆ ಗಮನ ಹರಿಸಿ ವಿಭೂತಿಪುರ ಕೆರೆಯಿಂದ ದೊಡ್ಡನೆಕ್ಕುಂದಿ ಕೆರೆಗೆ ಸೇರುವ ರಾಜಕಾಲುವೆಯನ್ನು ಪೂರ್ಣಗೊಳಿಸುವಂತೆ ಕೋರಿದರು,

ಕ್ರಮ: ಕಿರಿಯ ಅಭಿಯಂತರರು ಮತ್ತು ಎಸ್,ಡಬ್ಲ್ಯೂಡಿ ವಿಭಾಗ

ಶ್ರೀ, ಮಹೇಶ್ , ಅಬ್ಬಯ್ಯ ರೆಡ್ಡಿ ಬಡಾವಣೆ ರವರು ಮಾತನಾಡಿ ಅಬ್ಬಯ್ಯ ರೆಡ್ಡಿ ಬಡಾವಣೆ ಮುಖ್ಯರಸ್ತೆಯ 5ನೇ ತಿರುವಿನಲ್ಲಿ ಚರಂಡಿಯನ್ನು ಸ್ವಚ್ಛಗೊಳಿಸಿ ಆ ಪ್ರದೇಶವನ್ನು ಅಭಿವೃದ್ಧಿ ಪಡಿಸಿಕೊಡುವಂತೆ ಕೋರಿದರು.

ಕ್ರಮ: ವಾರ್ಡ್ ಅಭಿಯಂತರರು

ಶ್ರೀ. ಪ್ರಕಾಶ್, ಶಿವಗಂಗಾ ಬಡಾವಣೆ ರವರು ಮಾತನಾಡಿ ಬಡಾವಣೆಯಲ್ಲಿ ಅನಧಿಕೃತವಾಗಿ ದುಸ್ಥಿಯಾಗಿ ನಿಲ್ಲಿಸಿರುವ ಆಟೋ ರಿಕ್ಷಾವನ್ನು ತೆರವುಗೊಳಿಸುವಂತೆ ಕೋರಿದರು

ಶ್ರೀ. ಕಾರ್ತಿಕ್, ಅಬ್ಬಯ್ಯ ರೆಡ್ಡಿ ಬಡಾವಣೆ ರವರು ಮಾತನಾಡಿ 4ನೇ 'ಎ' ಅಡ್ಡರಸ್ತೆಯು ಕಿರಿದಾಗಿದ್ದು ವಾಹನಗಳನ್ನು ನಿಲುಗಡೆ ಮಾಡುವುದರಿಂದ ಒಡಟಕ್ಕೆ ತೊಂದರೆ ಯಾಗುತ್ತಿದ್ದು ಸರಿಪಡಿಸಿಕೊಡುವಂತೆ ಕೋರಿದರು.

ಕ್ರಮ: ವಾರ್ಡ್ ಅಭಿಯಂತರರು

ಶ್ರೀಮತಿ ಗೀತಾ ಪಾರ್ವತಿಕರ್, ವೀರಭದ್ರ ನಗರ ಬಡಾವಣೆ ರವರು ಮಾತನಾಡಿ ವೀರಭದ್ರ ನಗರ 3 ನೇ ಅಡ್ಡರಸ್ತೆಯಲ್ಲಿ ಆರ್.ಸಿ.ಸಿ ಚರಂಡಿ ಮಾಡಿದ್ದು ರಸ್ತೆಯನ್ನು ಅಭಿವೃದ್ಧಿ ಪಡಿಸಿಕೊಡುವಂತೆ ಕೋರಿದರು ಹಾಗೂ ಮಳೆ ನೀರು ಚರಂಡಿಗೆ ಸರಾಗವಾಗಿ ಹರಿಯುವಂತೆ ಶೋಲ್ಡರ್ ಡ್ರೈನ್ ಮಾಡಲು ಕೋರಿದರು.

ಕ್ರಮ: ವಾರ್ಡ್ ಅಭಿಯಂತರರು

ಬಡಾವಣೆಯಲ್ಲಿರುವ ಬಾಡಿಗೆದಾರರು ಪ್ರತಿ ದಿನ ಬೆಳ್ಳಿಗೆ ಕಸವನ್ನು ಏಕಏಕಿ ಬೀದಿಯ ಮೂಲೆಗಳಲ್ಲಿ ಎಸೆಯುತ್ತಿದ್ದು ಈ ಬಗ್ಗೆ ಗಮನ ಹರಿಸುವಂತೆ ಕೋರಿದರು.

ಕ್ರಮ: ಹಿರಿಯ ಆರೋಗ್ಯ ನಿರೀಕ್ಷಕರು

ಶ್ರೀಮತಿ.ಸತ್ಯ ವಾಣಿ ಮೊ.9964454083 ರವರು ವಾರ್ಡ್ 81 ರಲ್ಲಿ ಕಸದ ವಿಲೇವಾರಿ ಬಗ್ಗೆ ಮಾತನಾಡಿ ಈಗಾಗಲೇ ವಾರ್ಡ್ 81 ರ ಪ್ರದೇಶವನ್ನು ಬ್ಲಾಕ್‌ಗಳನ್ನಾಗಿ ವಿಂಗಡಿಸಿದ್ದು 36 ವಾಹನಗಳ ಬದಲಾಗಿ 22 ವಾಹನಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು ಈ ಬಗ್ಗೆ ಘನತ್ಯಾಜ್ಯ ನಿರ್ವಹಣಾ ಅಧಿಕಾರಿಗಳು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಕೋರಿದರು.

ಪಿ.ಪಿ.ಪಿ ಅಡಿಯಲ್ಲಿ ಸಂಘ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು ವಾರ್ಡ್ ನಲ್ಲಿರುವ ಸಕ್ರಿಯ ರೆಸಿಡೆಂಟ್ಸ್ ವೆಲ್ಫೇರ್ ಅಸೋಸಿಯೇಷನ್‌ಗಳು ಸಹ ಭಾಗವಹಿಸುವಂತೆ ಕೋರಿದರು.

ಅಧ್ಯಕ್ಷರು ಮುಂದಿನ ಮಾಹೆಗಳಲ್ಲಿ ಮೊದಲನೇ ಶನಿವಾರ ಹಾಗೂ ಮೂರನೇ ಶನಿವಾರ ತಪ್ಪದೇ ಸಮಿತಿ ಸಭೆಗೆ ಅಧಿಕಾರಿಗಳು ಸೇರಿದಂತೆ ಸಾರ್ವಜನಿಕರು ಹಾಗೂ ನಿವಾಸಿಗಳು ಹಾಜರಾಗಿ ತಮ್ಮ ಅಹವಾಲುಗಳನ್ನು ಬಗೆಹರಿಸಿಕೊಳ್ಳುವಂತೆ ಕೋರಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

27/11

ಕಿರಿಯ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ.81,ವಿಜ್ಞಾನ ನಗರ

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ
ನೋಡೆಲ್ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು, ಬಿಬಿಎಂಪಿ, ಮಹದೇವಪುರ ವಲಯ ರವರ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2. ತೋಟಗಾರಿಕೆ ಅಧೀಕ್ಷಕರು, ಬಿ.ಬಿ.ಎಂ.ಪಿ ಮಹದೇವಪುರ ವಲಯ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ.
4. ಕಂದಾಯ ಅಧಿಕಾರಿಗಳು/ಸಹಾಯಕ ಕಂದಾಯ ಅಧಿಕಾರಿಗಳು/ನಿರೀಕ್ಷಕರು, ವಿಜ್ಞಾನ ನಗರ ವಾರ್ಡ್.
5. ಕಲ್ಯಾಣ ಶಾಖೆ ಅಧಿಕಾರಿಗಳು, ಬಿ.ಬಿ.ಎಂ.ಪಿ ಮಹದೇವಪುರ ವಲಯ
6. ಎಸ್.ಡಬ್ಲ್ಯೂ.ಎಂ, ಅಧಿಕಾರಿಗಳು/ಗುತ್ತಿಗೆದಾರರು, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ 9ನೇ ಮಹಡಿ, ಬೆಂಗಳೂರು-11.
7. ವಿದ್ಯುತ್ ವಿಭಾಗದ, ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
8. ಆರೋಗ್ಯ ಅಧಿಕಾರಿಗಳು ವಿಜ್ಞಾನ ನಗರ ವಾರ್ಡ್.
9. ಸಹಾಯಕ ನಿರ್ದೇಶಕರು ಪಶುಪಾಲನೆ ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.

10. ಬಿ.ಡಬ್ಲ್ಯೂ.ಎಸ್.ಎಸ್.ಬಿ, ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
11. ಟ್ರಾಫೀಕ್/ಸಿವಿಲ್ ಪೋಲಿಸ್, ವಿಜ್ಞಾನ ನಗರ ವಾರ್ಡ್.
12. ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಷನ್ಸ್, ವಿಜ್ಞಾನ ನಗರ ವಾರ್ಡ್.
13. ವಾರ್ಡ್‌ಗೆ ಸಂಬಂಧಿಸಿದ ಎನ್.ಜಿ.ಓ,ಆರ್.ಡಬ್ಲ್ಯೂ.ಎ ಗಳು ವಿಜ್ಞಾನ ನಗರ ವಾರ್ಡ್.
14. ವಾರ್ಡ್‌ಗೆ ಸಂಬಂಧಿಸಿದ, ಎಸ್.ಸಿ/ಎಸ.ಟಿ ಸಂಘಟನೆಗಳು.
15. ವಾರ್ಡ್‌ನ ಆಸಕ್ತಿಯುಳ್ಳ ವಾಲೆಂಟಿಯರ್ಸ್